# ಆಫೀಸ್ ರೂಮಿನಲ್ಲಿ ಬುಸ್ ಬುಸ್ ನಾಗಪ್ಪ

**ಮಲೆನಾಡಿಗರಿಗೆ ಹಾವು ಅಪರೂಪವೇನಲ್ಲ. ಸುತ್ತಲೂ ಕಾಡು, ತೋಟವಿರುವುದರಿಂದ ಬಗೆ ಬಗೆಯ ಸರ್ಪಗಳ ದರ್ಶನ ಆಗುವುದುಂಟು. ಆದರೆ ಮನೆಯ ಕೋಣೆ ಹೊಕ್ಕಿದ್ದ ಗೋಧಿ ನಾಗರಹಾವನ್ನು ಹಿಡಿಯಲು ಪಟ್ಟ ಪಡಿಪಾಟಲು ಕಡಿಮೆಯದ್ದಾಗಿರಲಿಲ್ಲ.**

**■ ಎಚ್.ಎಸ್. ನವೀನಕುಮಾರ್**



ಮಲೆನಾಡು, ಕರಾವಳಿ ಭಾಗಗಳಲ್ಲಿ ಜನರು ಪರಿಸರಕ್ಕೆ ಹತ್ತಿರವಾಗಿ ಜೀವಿಸುವುದರಿಂದ ಪರಿಸರದ ಜೀವಸಂಕುಲದ ಜೊತೆಗೆ ಒಡನಾಟ ಅಧಿಕ. ಕಾಡ ನಡುವೆಯೇ ಮನೆಗಳ ನಿರ್ಮಾಣವಾಗಿರುವುದರಿಂದ, ಮನೆ ಸಮೀಪ ಹಾವು ಮುಂತಾದ ವಿಷಜಂತುಗಳ ಓಡಾಟ ಸಹಜವಾಗಿಯೇ ಜಾಸ್ತಿ. ಮಲೆನಾಡು ಕರಾವಳಿ ಕಡೆ, ನಾಗಪೂಜೆ, ನಾಗಾರಾಧನೆ ಹೆಚ್ಚಿರುವುದರಿಂದ ಹಾಗೂ ಹಾವುಗಳನ್ನು ದೇವರೆಂದು ಪೂಜಿಸುವುದರಿಂದ ಇಲ್ಲಿ ಹಾವುಗಳನ್ನು ಕೊಲ್ಲುವುದು ಅಪರೂಪ. ಹಾಗೆಯೇ ಹಾವುಗಳೂ ಮನುಷ್ಯರಿಂದ ದೂರ ಇರಲು ಬಯಸುತ್ತವೆ. ಆಹಾರ ಹುಡುಕಾಟದ ಅನಿವಾರ್ಯತೆಯಲ್ಲಿ, ಮನೆಯೊಳಗೆ ಸೇರಿರುವ ಇಲಿ, ಕಪ್ಪೆಗಳನ್ನು ಬೇಟೆಯಾಡಲು ಅವು ಬಂದಾಗ ಮನುಷ್ಯರೊಂದಿಗೆ ಅವುಗಳ ಮುಖಾಮುಖಿ ಆಗುತ್ತದೆ.

ನಮ್ಮ ಮನೆಯಿದ್ದ ಸಚ್ಚಿದಾನಂದಪುರ, ಶೃಂಗೇರಿ ಪೇಟೆಯಿಂದ ದೂರವಿದ್ದ ಹಾಗೂ ತುಂಗಾನದಿಯ ಸಮೀಪವಿದ್ದ ಒಂದು ಪುಟ್ಟ ಬಡಾವಣೆ. ಇಲ್ಲಿಗೆ ದಟ್ಟಕಾಡಿನ ನಿವಾಸಿಗಳಾದ ಕಾಳಿಂಗ ಸರ್ಪದಂತಹ ದೊಡ್ಡ ಹಾವುಗಳ ಭೇಟಿ ಇರುತ್ತಿರಲಿಲ್ಲವಾದರೂ, ನಾಗರಹಾವು, ಕೇರೆಹಾವು, ಕನ್ನಡಿ ಹಾವು ಮುಂತಾದ ಉರಗಗಳ ಓಡಾಟ ಸರ್ವೇಸಾಮಾನ್ಯವಾಗಿತ್ತು. ನಮ್ಮ ಮನೆಯ ಹಿತ್ತಲಲ್ಲಿ ಇವು ಆಗಾಗ ಕಾಣಿಸಿಕೊಳ್ಳುತ್ತಿದ್ದವು.

ಅಮ್ಮನಿಗೆ ಹಾವಿನ ಭಯ ಇರಲಿಲ್ಲ. ಅವಳ ಹೆಸರು 'ನಾಗರತ್ನ' ಎಂದಿರುವುದರಿಂದ ಅವಳು ಹಾವಿಗೆ ಹೆದರುವುದಿಲ್ಲ ಎಂದು ನಾವು ಹೇಳುತ್ತಿದ್ದೆವು! 'ನಾವು ಅವಕ್ಕೆ ತೊಂದರೆ ಮಾಡದಿದ್ದರೆ, ಅವು ನಮಗೇನೂ ತೊಂದರೆ ಮಾಡುವುದಿಲ್ಲ' ಎಂಬುದು ಅಮ್ಮನ ನಿಲುವು. ಮಳೆಗಾಲದ ಸಂದರ್ಭದಲ್ಲಿ ನಮ್ಮ ಮನೆಯ ಸುತ್ತಲೂ ನೀರು ನಿಂತು, ಮನೆಯ ಅಂಗಳ ಕಪ್ಪೆಗಳ ಸಂತಾನೋತ್ಪತ್ತಿ ಕೇಂದ್ರವಾಗಿ ಪರಿವರ್ತಿತವಾಗುತ್ತಿತ್ತು. ಇಲ್ಲಿ ಜನ್ಮ ತಾಳಿದ ಕಪ್ಪೆಗಳು, ಆಗಾಗ ಮನೆಯೊಳಗೆ ಪ್ರವೇಶಿಸುತ್ತಿದ್ದವು ಹಾಗೂ ಅವುಗಳನ್ನು ಬೇಟೆಯಾಡಲು ಹಾವುಗಳೂ ಎಂಟ್ರಿ ಕೊಡುತ್ತಿದ್ದವು. ನಮ್ಮ ಮನೆ ಹಂಚಿನ ಮನೆಯಾದ್ದರಿಂದ ಅದಕ್ಕೆ ಮರದ ಮುಚ್ಚಿಗೆ ಅಥವಾ ಸೀಲಿಂಗ್ ಮಾಡಿಸಲಾಗಿತ್ತು. ಈ ಮುಚ್ಚಿಗೆಯ ಅಟ್ಟದಲ್ಲಿ ಅಡಗಿರುತ್ತಿದ್ದ ಇಲಿಗಳನ್ನು ಹಿಡಿಯಲು, ಹಾವುಗಳು ಮನೆಯ ಹಂಚನ್ನೇರಿ ಬರುತ್ತಿದ್ದದ್ದೂ ಉಂಟು. ಹಾಗೇ ಕೆಲವೊಮ್ಮೆ ಹಂಚಿನಿಂದ ಅಟ್ಟದ ಮೇಲೆ ದೊಪ್ಪೆಂದು ಬೀಳುತ್ತಿದ್ದುದೂ ಉಂಟು!

ಒಂದು ಸಾರಿ ಮನೆಯ ಹಿತ್ತಲ ಕಡೆ ಇಲಿ ಹಿಡಿಯಲು ಬಂದಿದ್ದ ಉದ್ದದ ಕೇರೆ ಹಾವೊಂದು, ಏನಕ್ಕೋ ಅಲ್ಲಿಗೆ ಹೋದ ನನ್ನನ್ನು ಹಿಂಬಾಲಿಸಿಕೊಂಡು ಬಂದಿತ್ತು! ನಾನು ಗಾಬರಿಯಿಂದ 'ಹಾವು ಹಾವು' ಎನ್ನುತ್ತಾ ಓಡಿದ್ದೆ. ಅದೂ ನನ್ನನ್ನು ಕಂಡು ಗಾಬರಿಗೊಂಡು ಸಿಮೆಂಟ್ ನೆಲದಲ್ಲಿ ಸರಿಯಾಗಿ ಚಲಿಸಲಾಗದೆ ಆಚೀಚೆ ಹರಿದಾಡಿತ್ತಷ್ಟೇ! ಮತ್ತೊಮ್ಮೆ ನಾನು ಶಾಲೆಯಲ್ಲಿ ಓದುತ್ತಿದ್ದಾಗ, ನನ್ನ ಆಪ್ತ ಸ್ನೇಹಿತನೊಬ್ಬನಿಗೆ ಕೇರೆ ಹಾವೊಂದು ಕಚ್ಚಿತ್ತು. ಅದು ವಿಷಕಾರಿ ಅಲ್ಲದಿದ್ದರಿಂದ ಯಾವುದೇ ಅಪಾಯ ಸಂಭವಿಸಿರಲಿಲ್ಲ. ರೈತಮಿತ್ರ ಎಂದೇ ಕರೆಯಲ್ಪಡುವ ಕೇರೆ ಹಾವುಗಳು, ಬಹಳ ಉದ್ದದ ಹಾವುಗಳು. ನಾವು ಇವುಗಳಿಗೆ 'ಕೇರೆಬುಡ್ಡ' ಎಂದು ಕರೆಯುತ್ತಿದ್ದೆವು. ಕೆಲವೊಮ್ಮೆ ಬಣ್ಣದಲ್ಲಿ ನಾಗರಹಾವಿನಂತೆಯೇ ಗೋಚರಿಸುತ್ತಿದ್ದ ಇವುಗಳನ್ನು, ಇವು ಚಲಿಸುವ ವೇಗವನ್ನು ಆಧರಿಸಿ 'ಕೇರೆಬುಡ್ಡ' ಎಂಬ ತೀರ್ಮಾನಕ್ಕೆ ಬರುತ್ತಿದ್ದೆವು.

ಒಂದು ರಾತ್ರಿ ಅಪ್ಪನಿಗೆ, ಹಿತ್ತಲ ಕಡೆ ಬಾಗಿಲು ಹಾಕುವಾಗ ಯಾಕೋ ಟೈಟ್ ಆಗುತ್ತಿದೆ ಅಂತ ಅನ್ನಿಸಿತಂತೆ. ಮಳೆಯ ಕಾರಣ ಮರದ ಬಾಗಿಲು ಟೈಟಾಗಿರಬಹುದು, ಎಂದು ಒತ್ತಿ ಬಾಗಿಲು ಹಾಕಿದ್ದರು. ಬೆಳಗ್ಗೆ ಎದ್ದು ನೋಡಿದರೆ, ಬಾಗಿಲಿನ ಮೂಲೆಗೆ ಒಂದು ಕನ್ನಡಿ ಹಾವು ಸಿಕ್ಕಿ ಅಪ್ಪಚ್ಚಿಯಾಗಿತ್ತು! ಅದೃಷ್ಟವಶಾತ್ ತುಂಬಾ ವಿಷಕಾರಿಯಾದ ವೈಪರ್ ಜಾತಿಯ ಈ ಕನ್ನಡಿ